# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯವರಿಗೆ ವಿಮಾನದ ಮೂಲಕ ಪ್ರಯಾಣ ಕೈಗೊಳ್ಳಲು ನಿಯಮಾವಳಿಗಳ ಸಡಿಲಿಕೆ.

*****

**ಓದಲಾಗಿದೆ:**

1. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರ ಟಿಪ್ಪಣಿ ಸಂಖ್ಯೆ: ಕವಿಪ/ಕಾಕ/ಇತರೆ/2024 ದಿನಾಂಕ:13.09.2024.
2. ಕಡತದ ಸಂಖ್ಯೆ:ಕವಿಪಸ/ಆ-1/97/ವಿಪ್ರಅ/2014, ಕಂಡಿಕೆ ಸಂಖ್ಯೆ:104 ರಿಂದ 109ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ (1)ರಲ್ಲಿ ಭಾರತೀಯ ವಿಭಾಗದ 10ನೇ ಸಿ.ಪಿ.ಎ. ಸಮ್ಮೇಳನವು ದಿನಾಂಕ:23.09.2024 ಮತ್ತು ದಿನಾಂಕ:24.09.2024ರಂದು ನವದೆಹಲಿಯಲ್ಲಿ ನಡೆಯಲಿದ್ದು, ಸದರಿ ಸಭೆಗೆ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು, ಮಾನ್ಯ ಉಪ ಸಭಾಪತಿಯವರು, ಕಾರ್ಯದರ್ಶಿಯವರು ಭಾಗವಹಿಸಲಿದ್ದಾರೆ, ಮಾನ್ಯ ಸಭಾಪತಿಯವರಿಗೆ ಸಹಕರಿಸಲು ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ: ಮಹೇಶ್ ವಾಳ್ವೇಕರ್ ಇವರನ್ನು ನಿಯೋಜಿಸುವಂತೆ ಮಾನ್ಯ ಸಭಾಪತಿಯವರು ಸೂಚಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ವಿಧಾನ ಸಭೆಯ ಕಡತದ ಸಂಖ್ಯೆ:ಕವಿಸಸ/CPA/10thIRC/2024ರಲ್ಲಿ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಅನುಮೋದನೆ ನೀಡಿರುವುದರಿಂದ ಸದರಿ ಸಮ್ಮೇಳನದಲ್ಲಿ ಭಾಗವಹಿಸಲು ಅನುವಾಗಲು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಮಾನ್ಯ ಕಾರ್ಯದರ್ಶಿಯವರಿಂದ ನಿರ್ದೇಶಿಸಲ್ಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯಾದ ಡಾ: ಮಹೇಶ್ ವಾಳ್ವೇಕರ್, ಇವರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವುದರಿಂದ ವಿಮಾನದಲ್ಲಿ ಪ್ರಯಾಣ ಮಾಡುವುದಕ್ಕೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 487ನ್ನು ಸಡಿಲಿಸಿ, ವಿಮಾನ ಮೂಲಕ ಪ್ರಯಾಣಿಸಲು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ: ಕವಿಪ:ಆ-1:37:CPA:2024**
**ಬೆಂಗಳೂರು, ದಿನಾಂಕ:18.09.2024.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:23.09.2024 ಮತ್ತು ದಿನಾಂಕ:24.09.2024ರಂದು ನವದೆಹಲಿಯಲ್ಲಿ ನಡೆಯಲಿರುವ ಭಾರತೀಯ ವಿಭಾಗದ 10ನೇ ಸಿ.ಪಿ.ಎ. ಸಮ್ಮೇಳನಕ್ಕೆ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು, ಮಾನ್ಯ ಉಪ ಸಭಾಪತಿಯವರು, ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ, ಕಾರ್ಯದರ್ಶಿಯವರು ಭಾಗವಹಿಸಲಿದ್ದಾರೆ ಹಾಗೂ ಮಾನ್ಯ ಸಭಾಪತಿಯವರಿಗೆ ಸಹಕರಿಸಲು ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯವರಾದ ಡಾ:ಮಹೇಶ್ ವಾಳ್ವೇಕರ್, ಇವರು ಭಾಗವಹಿಸಲು ಹಾಗೂ ಸದರಿ ಅಧಿಕಾರಿಯವರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವುದರಿಂದ ಮಾನ್ಯ ಸಭಾಪತಿಯವರ ಜೊತೆಯಲ್ಲಿ ಬೆಂಗಳೂರಿನಿಂದ ನವದೆಹಲಿಗೆ ವಿಮಾನದ ಮೂಲಕ ಹೋಗಿ ಬರಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 487ನ್ನು ಸಡಿಲಿಸಿ ಅನುಮತಿ ನೀಡಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,
ನಿರ್ಮಲ
(ಎಸ್.ನಿರ್ಮಲ)
ಅಪರ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ.

1) ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ, ಕಾರ್ಯದರ್ಶಿಯವರು, ಕವಿಪ.

2) ಡಾ: ಮಹೇಶ್ ವಾಳ್ವೇಕರ್, ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ, ಕವಿಪ.

<u>ಪ್ರತಿಗಳು:</u>

01. ಮಹಾಲೇಖಪಾಲರು (ಅ ಮತ್ತು ಆ) ಕರ್ನಾಟಕ, ಬೆಂಗಳೂರು.
02. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
03. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
04. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
05. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
06. ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕವಿಪ.
07. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರ ಶಾಖೆ/ಅರ್ಜಿಗಳ ಶಾಖೆ/ಶಾಸಕರ ಭವನ ಕವಿಪ.
08. ಆರ್ಥಿಕ ಅಧಿಕಾರಿ, ಕವಿಪ.
09. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಗಣಕ ಕೇಂದ್ರ, ಕವಿಪ.
10. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.

******